ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE: 1/2/2020

ಈ ಬಾರಿ ಸಂಪುಟ ಪುನರ್‌ರಚನೆ ಇಲ್ಲ, ವಿಸ್ತರಣೆ ಮಾತ್ರ | ಬಿಎಸ್‌ವೈಗೆ ಸ್ಥಳೀಯ-ವಲಸಿಗ ...

ಮನವೊಲಿಸುವ ಸವಾಲು | ಹೊಸ ಡಿಸಿಎಂ ಹುದ್ದೆ ಇಲ್ಲ, ಜುಲೈ ಬಳಿಕ ಮೇಜರ್ ಸರ್ಜರಿ ...

# ವರಿಷ್ಠರ ಗ್ರೀನ್ ಸಿಗ್ನಲ್

1-2-20

■ ವಿಕ ಸುದ್ದಿಲೋಕ ಹೊಸದಿಲ್ಲಿ / ಬೆಂಗಳೂರು

ಬಹು ನಿರೀಕ್ಷಿತ ಸಂಪುಟ 'ವಿಸ್ತರಣೆ'ಗೆ ಬಿಜೆಪಿ ವರಿಷ್ಠರು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಅಂದರೆ ಈ ಬಾರಿ ಸಂಪುಟ 'ಪುನರ್‌ರಚನೆ' ಇರುವುದಿಲ್ಲ. ಇದರೊಂದಿಗೆ ಮೂವರು ಡಿಸಿಎಂಗಳೂ ಸೇರಿದಂತೆ ಸಂಪುಟದ ಹಾಲಿ ಸದಸ್ಯರು ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ. ಆದರೆ, ಜುಲೈ ಬಳಿಕ ಸಂಪುಟಕ್ಕೆ ಮೇಜರ್ ಸರ್ಜರಿಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶುಕ್ರವಾರ ಸಂಜೆ ಭೇಟಿಯಾದ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಸಂಪುಟ ವಿಸ್ತರಣೆಗೆ ಸಮ್ಮತಿ ಪಡೆದುಕೊಳ್ಳಲು ಯಶಸ್ವಿಯಾದರು. ಅದರಂತೆ '10 ಪ್ಲಸ್ 3' ಫಾರ್ಮುಲಾದಡಿ ಮಂತ್ರಿಮಂಡಲ ವಿಸ್ತರಣೆಯಾಗಲಿದೆ. ಅರ್ಹರ ಪೈಕಿ 10 ಶಾಸಕರು ಹಾಗೂ ಮೂಲ ಬಿಜೆಪಿಯಿಂದ 3 ಶಾಸಕರು ಸಂಪುಟ ಸೇರ್ಪಡೆಯಾಗಲಿದ್ದಾರೆ.

ಈ ನಡುವೆಯೂ ಕೆಲವು ಸಂಕೀರ್ಣತೆಯನ್ನು ಭೇದಿಸಿ ನೂತನ ಸಚಿವರ ಪ್ರಮಾಣವಚನ ಸಮಾರಂಭಕ್ಕೆ ಮುಹೂರ್ತ ನಿಗದಿ ಮಾಡುವ ಸವಾಲನ್ನು ಸಿಎಂ ಎದುರಿಸಬೇಕಿದೆ. ಅರ್ಹರಲ್ಲಿ ಎಲ್ಲ 11 ಮಂದಿಗೂ ಸಚಿವ ಸ್ಥಾನ ನೀಡುವಂತೆ ಒತ್ತಡವಿದೆ. ಈ ಸಂಖ್ಯೆಯನ್ನು 10ಕ್ಕೆ ಇಳಿಸಲು ಹೈಕಮಾಂಡ್ ಸೂಚಿಸಿದೆ. ಶ್ರೀಮಂತ ಬಾಳಾಸಾಹೇಬ್ ಪಾಟೀಲ್ ಹಾಗೂ ಮಹೇಶ್ ಕುಮಟಳ್ಳಿ ಪೈಕಿ ಯಾರನ್ನಾದರೂ ಸಂಪುಟಕ್ಕೆ ತೆಗೆದುಕೊಳ್ಳಬಹುದು. ಈ ಇಬ್ಬರನ್ನು ಒಪ್ಪಿಸುವ ಜವಾಬ್ದಾರಿಯನ್ನು ತಾವೇ ನಿಭಾಯಿಸಬೇಕು ಎಂದು ವರಿಷ್ಠರು ಸಿಎಂಗೆ ನಿರ್ದೇಶನ ನೀಡಿದ್ದಾರೆ.

ಅಮಿತ್ ಶಾ ಹಾಗೂ ನಡ್ಡಾ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ಸಂಪುಟ ವಿಸ್ತರಣೆಗೆ ಅವರು ಒಪ್ಪಿಗೆ ಸೂಚಿಸಿದ್ದಾರೆ. ಅವರು ನೀಡಿರುವ ಸಲಹೆಗೆ ಒಪ್ಪಿಗೆಯಿದೆ. ಈ ಸಂಬಂಧ ಕೆಲವು ಶಾಸಕರೊಂದಿಗೆ ಮಾತನಾಡಿ ಮನವೊಲಿಸಿದ ಬಳಿಕ 2-3 ದಿನದೊಳಗೆ ಸಂಪುಟ ವಿಸ್ತರಣೆ ಮಾಡಲಾಗುವುದು.

-ಯಡಿಯೂರಪ್ಪ ಸಿಎಂ



ದಿಲ್ಲಿಯಲ್ಲಿ ಬಿಜೆಪಿ ವರಿಷ್ಠರಾದ ಜೆ.ಪಿ. ನಡ್ಡಾ, ಅಮಿತ್ ಶಾ ಜತೆ ಸಿಎಂ ಯಡಿಯೂರಪ್ಪ, ಪುತ್ರ ವಿಜಯೇಂದ್ರ ಚರ್ಚೆ ನಡೆಸಿದರು.

**ಮತ್ತೆ ರೆಬೆಲ್ ಬುದ್ಧಿ ತೋರಿಸಿದ ರಮೇಶ್ ಜಾರಕಿಹೊಳಿ »06**

## ...ರಿಗೆಲ್ಲಾ ಸ್ಥಾನ?



10 ಪ್ಲಸ್ 3 ಫಾರ್ಮುಲಾದಡಿ 10 ಅರ್ಹರು ಹಾಗೂ ಮೂಲ ಬಿಜೆಪಿ ಕೋಟಾದಿಂದ 3 ಶಾಸಕರಿಗೆ ಸಚಿವ ಸ್ಥಾನ ನೀಡಲಾಗುತ್ತದೆ. ಅರ್ಹರಲ್ಲಿ 10ನೇ ಸ್ಥಾನಕ್ಕಾಗಿ ಕುಮಟಳ್ಳಿ, ಶ್ರೀಮಂತ ಪಾಟೀಲ್ ನಡುವೆ ಪೈಪೋಟಿಯಿದೆ. ಬೆಳಗಾವಿ ಜಿಲ್ಲೆಯಿಂದ ಲಿಂಗಾಯತ ಸಮುದಾಯದ ಲಕ್ಷ್ಮಣ ಸವದಿ, ಶಶಿಕಲಾ ಜೊಲ್ಲೆ ಈಗಾಗಲೇ ಸಂಪುಟದಲ್ಲಿದ್ದಾರೆ. ಉಮೇಶ್ ಕತ್ತಿ ಸಂಪುಟ ಸೇರ್ಪಡೆ ಬಹುತೇಕ ಖಚಿತ. ಇದರ ಮಧ್ಯೆ ಕುಮಟಳ್ಳಿ ಅವರಿಗೂ ಸ್ಥಾನ ನೀಡಿದರೆ ಲಿಂಗಾಯತರಿಗೆ ಹೆಚ್ಚು ಪ್ರಾತಿನಿಧ್ಯ ಕೊಟ್ಟಂತಾಗಲಿದೆ. ಹಾಗಾಗಿ ಅಲ್ಪಸಂಖ್ಯಾತ ಜೈನ ಸಮುದಾಯದ ಶ್ರೀಮಂತ ಪಾಟೀಲ್‌ಗೆ ಅದೃಷ್ಟ ಒಲಿಯಬಹುದು. ಇನ್ನು, ಮೂಲ ಬಿಜೆಪಿಗರಲ್ಲಿ ಕತ್ತಿ ಅವರೊಂದಿಗೆ ಅರವಿಂದ ಲಿಂಬಾವಳಿ ಹೆಸರು ಮುಂಚೂಣಿಯಲ್ಲಿದೆ. ಮತ್ತೊಂದು ಸ್ಥಾನಕ್ಕೆ ಹಾಲಪ್ಪ ಆಚಾರ್, ವಿ.ಎಸ್.ಅಂಗಾರ, ಹಾಲಾಡಿ ಶ್ರೀನಿವಾಸ ಶೆಟ್ಟಿ, ತಿಪ್ಪಾರೆಡ್ಡಿ, ರಾಜೂಗೌಡ ಮತ್ತಿತರರ ಹೆಸರು ಓಡುತ್ತಿದೆ.

## ಷರತ್ತು...

ಸಂಪುಟ ವಿಸ್ತರಣೆಗೆ ಅನು... ನೀಡುವಾಗ ಅಮಿತ್ ಶಾ ... ಷರತ್ತುಗಳನ್ನೂ ವಿಧಿಸಿ...ದೆ. ... ಯಂತ್ರಕ್ಕೆ ಚುರುಕು ... ಪಾರದರ್ಶಕ ಆಡಳಿ... ಇದರಲ್ಲಿ ಸೇ...ವೆ.

- ಸರಕಾರ ಮತ್ತು ಪಕ್ಷದ ನಡು... ಸೃಷ್ಟಿಯಾಗದಂತೆ ಎಚ್ಚ... ವಹಿ...
- ಪಕ್ಷದ ಸಲಹೆ, ಸೂಚನೆ ಪಾಲಿ...
- ಪಕ್ಷ ಸಂಘಟನೆಗೆ ನೆರ...ಗಬೇ...
- ಆಡಳಿತ ಯಂತ್ರಕ್ಕೆ ... ಮುಟ್ಟಿಸಬೇಕು
- ಶಾಸಕರ ಕ್ಷೇತ್ರ ಅಭಿ... ಸ್ಪಂದಿಸಬೇಕು
- ಎಲ್ಲರನ್ನೂ ವಿಶ್ವಾಸಕ್ಕೆ ...ಗೆದು... ಹೋಗಬೇಕು
- ಮುಂದಿನ 6 ತಿಂಗಳಲ್ಲಿ ... ಬಗ್ಗೆ ಮೆಚ್ಚುಗೆ ವ್ಯಕ್ತವಾ... ನಡೆಸಬೇಕು.

# ಸಂಪುಟಕ್ಕೆ ವರಿಷ್ಠರ ಗ್ರೀನ್ ಸಿಗ್ನಲ್

ವಿ.ಕ. 1-2-20

» ಮೊದಲ ಪುಟದಿಂದ

ಆದರಂತೆ ರಮೇಶ್ ಜಾರಕಿಹೊಳಿ ಜತೆಗೆ ಮಾತುಕತೆ ನಡೆಸಲಿರುವ ಬಿಎಸ್‌ವೈ ಅವರು, ಶ್ರೀಮಂತ ಪಾಟೀಲ್, ಕುಮಠಳ್ಳಿ ಪೈಕಿ ಯಾರಿಗೆ ಮಂತ್ರಿ ಸ್ಥಾನ ನೀಡುವುದೆಂದು ನಿರ್ಧರಿಸಲಿದ್ದಾರೆ. ಹಾಗೆಯೇ ಮೂಲ ಬಿಜೆಪಿಯಿಂದಲೂ ಹಲವು ಆಕಾಂಕ್ಷಿಗಳಿದ್ದಾರೆ. ಅಂಥವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡ ಬಳಿಕ ಸಂಭಾವ್ಯ ಸಚಿವರ ಪಟ್ಟಿಯನ್ನು ಸಿಎಂ ದಿಲ್ಲಿಗೆ ರವಾನಿಸಲಿದ್ದಾರೆ. ಅದಕ್ಕೆ ಅಮಿತ್ ಶಾ ಒಪ್ಪಿಗೆಯ ಮುದ್ರೆಯೊತ್ತುತ್ತಿದ್ದಂತೆ ಸಂಪುಟ ವಿಸ್ತರಣೆಯಾಗಲಿದೆ.

ಹೈಕಮಾಂಡ್ ಸೂಚನೆ ಹಿನ್ನೆಲೆಯಲ್ಲಿ ಅರ್ಹ ಶಾಸಕರೊಂದಿಗೆ ಸಿಎಂ ಬಿಎಸ್‌ವೈ ಶನಿವಾರ ಸಭೆ ನಡೆಸಲಿದ್ದಾರೆ. ಈ ಸಂಬಂಧ 'ಅರ್ಹ' ಶಾಸಕರಿಗೆ ಆಹ್ವಾನವನ್ನೂ ಕೊಡಲಾಗಿದೆ.

**ಜುಲೈ ಅಂತ್ಯಕ್ಕೆ ಡೆಡ್‌ಲೈನ್**

ಜುಲೈ 26ಕ್ಕೆ ಬಿಜೆಪಿ ಸರಕಾರ 1 ವರ್ಷ ಪೂರೈಸಲಿದೆ. ಈ ಹಂತದಲ್ಲಿ ಸಂಪುಟಕ್ಕೆ ಮೇಜರ್ ಸರ್ಜರಿ ಮಾಡಲು ಹೈಕಮಾಂಡ್ ತೀರ್ಮಾನಿಸಿದೆ. ಇದಕ್ಕೆ ಪೂರಕವಾಗಿ ಸಚಿವರ ಕಾರ್ಯವೈಖರಿಯ ಮೌಲ್ಯಮಾಪನವೂ ಆಗಲಿದೆ. ಹಲವು ಬಾರಿ ಅಧಿಕಾರ ಅನುಭವಿಸಿದವರಿಗೆ ಪಕ್ಷದ ಸಂಘಟನೆ ಹೊಣೆ ವಹಿಸಿ ಹೊಸ ಮುಖಗಳಿಗೆ ಅವಕಾಶ ನೀಡುವ ಯೋಚನೆಯೂ ಇದೆ. ಹಿರಿಯರಿಗೆ ಕಡ್ಡಾಯವಾಗಿ ವಿಶ್ರಾಂತಿ ನೀಡಬೇಕಾಗುತ್ತದೆ. ಅದಕ್ಕೆ ಮಾನಸಿಕವಾಗಿ ಸಿದ್ಧರಾಗಿರಬೇಕು ಎಂಬ ಸೂಚನೆಯನ್ನೂ ಸಿಎಂಗೆ ವರಿಷ್ಠರು ನೀಡಿದ್ದಾರೆ ಎನ್ನಲಾಗಿದೆ.

## ಮೂಲ ನಿವಾಸಿಗಳ 5 ಪ್ಲಸ್ 5 ಸೂತ್ರ

ಈ ನಡುವೆ ಪಕ್ಷದ ಮೂಲ ನಿವಾಸಿಗಳಿಗೆ ಆದ್ಯತೆ ನೀಡುವ 5 ಪ್ಲಸ್ 5 ಫಾರ್ಮುಲಾ ಕೂಡ ಚರ್ಚೆಯಲ್ಲಿದೆ. ಈ ಸೂತ್ರ ಪಾಲಿಸಿದರೆ ಅರ್ಹರಲ್ಲಿ 5 ಮಂದಿಗಷ್ಟೇ ಸಂಪುಟ ಸೇರುವ ಅವಕಾಶ ದೊರಕಲಿದೆ. ಮೂಲ ಬಿಜೆಪಿಯಿಂದಲೂ 5 ಶಾಸಕರು ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ. ಕಲ್ಯಾಣ ಕರ್ನಾಟಕ, ಕರಾವಳಿ, ಮಧ್ಯ ಕರ್ನಾಟಕಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವ ಹಾಗೂ ಹೊಸ ಮುಖಗಳಿಗೆ ಛಾನ್ಸ್ ಕೊಡುವ ದೃಷ್ಟಿಯಿಂದ ವರಿಷ್ಠರು ಈ ಪ್ರಸ್ತಾಪವಿಟ್ಟಿದ್ದಾರೆ. ಸಂಪೂರ್ಣವಾಗಿ ವಲಸಿಗರಿಗೆ ಮಣೆ ಹಾಕಿದರೆ ಪಕ್ಷನಿಷ್ಠರ ಆತ್ಮಸ್ಥೈರ್ಯಕ್ಕೆ ಧಕ್ಕೆಯಾಗಬಹುದು ಎನ್ನುವುದು ಈ ಸೂತ್ರದ ಹಿಂದಿನ ಸಾರ.